ಓ.ಎಸ್ ನಂ.*145/2018*
ಡಿ.ಡಬ್ಲು-*1*

ಸಾಕ್ಷಿಯನ್ನು ಇಂದು ದಿನಾಂಕಃ *04.01.2024* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು : ವಾದಿ ಪರ ಶ್ರೀ ಬಿ.ಎ.ಡಿ. ವಕಿಲರಿಂದ**

ನಿಡಿ-೧ಕ್ಕೆ ವಾದಿಯ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಎಂಥರೆ ಸರಿ. ಸಾಕ್ಷಿಗೆ ನಿಡಿ-೧ನ್ನು ತೋರಿಸಿ ಇದು ಸಹಿ ನಿನ್ನದಾ ಎಂದರೆ ಸಾಕ್ಷಿ ಅದು ನನ್ನ ಸಹಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಮೊದಲನೇ ಪೇಜನಲ್ಲಿರುವ ಸಹಿಯನ್ನು ತೋರಿಸಿ ಇದು ನಿನ್ನ ಸಹಿಯೇ ಎಂದು ಕೇಳಿದಾಗ ಅದು ನನ್ನ ಸಹಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ವಕಾಲತ ಮೇಲಿರುವ ಸಹಿಯನ್ನು ತೋರಿಸಿದಾಗ ಸಾಕ್ಷಿ ವಕಾಲತದಲ್ಲಿರುವ ಸಹಿ ತನ್ನ ಸಹಿ ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ನಿಪಿ-೧ನ್ನು ತೋರಿಸಿ ಈ ನಿಪಿ-೧ರ ಪ್ರಕಾರ ವಾಸ್ತವ ಸ್ಥಿತಿ ಇದೆಯಾ ಎಂದು ಕೇಳಿದಾಗ ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ದಕ್ಷಿಣ ದಿಕ್ಕಿಗೆ 2 ಫೀಟ್ ಸಂಧಿ ಇದೆ, ಪೂರ್ವ ದಿಕ್ಕಿಗೆ ಸರಕಾರಿ ರಸ್ತೆ ಇದೆ ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿದ ಆಸ್ತಿಯ ಖರೀದಿ ಪತ್ರದಲ್ಲಿ (ನಿಡಿ-೧) ದಕ್ಷಿಣ ದಿಕ್ಕಿಗೆ ಸರಕಾರಿ ರಸ್ತೆ ಇದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಡಿ-೪ ರಂತೆ ಪರವಾನಿಗೆ ಪಡೆಯುವ ಪೂರ್ವದಲ್ಲಿ ಕಟ್ಟಡ ರಚನೆಯ ನಕ್ಷೆಯನ್ನು ಪಂಚಾಯತಿಯವರಿಗೆ ನೀಡಿದ್ದೀರಾ ಎಂಥರೆ ಸಾಕ್ಷಿ ನೀಡಿದ್ದೇವೆ ಎಂಥು ನುಡಿಯುತ್ತಾರೆ. ಸದರಿ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂಥರೆ ಸರಿ. ಕಟ್ಟಡ ರಚನೆ ಪರವಾನಿಗೆ ಪತ್ರ ನನಗೆ ನೀಡುವ

ಪೂರ್ವದಲ್ಲಿ ಪಂಚಾಯತಿಯವರು ವಾದಿಗೆ ನೀಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿಗೆ ಗೊತ್ತಾಗಬಾರದೆಂದು ಕದ್ದು ಕಟ್ಟಡ ರಚನೆ ಪರವಾನಿಗೆ ಪತ್ರವನ್ನು ಪಂಚಾಯತಿಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. 2017 ರಲ್ಲಿ ಮೊಟ್ಟ ಮೊದಲ ಬಾರಿಗೆ ಅನಧೀಕೃತ ಕಟ್ಟಡ ನಡೆದಿದೆ ಎಂದು ಹೇಳಿ ವಾದಿ ಪಂಚಾಯತಿಗೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದರು ಆ ವಿಷಯ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತು, ನಾನೂ ತಕರಾರು ಸಲ್ಲಿಸಿರುತ್ತೇನೆ, ನನ್ನ ಕಟ್ಟಡ ಪೂರ್ಣಗೊಂಡ ನಂತರ ತಕರಾರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಕಟ್ಟಡ ಪರವಾನಿಗೆಯ ನಕ್ಷೆಯ ಪ್ರಕಾರ ಪೂರ್ವ ದಿಕ್ಕಿಗೆ ಯಾವುದೇ ಸ್ಟೇರಕೇಸ್, ಕಟ್ಟೆ ಮತ್ತು ಡ್ರೈನೇಜ್ ಪೈಪ ಬಗ್ಗೆ ಉಲ್ಲೇಖ ಇಲ್ಲ ಎಂಧರೆ ಸರಿ ಅಲ್ಲ. ಆ ಕಾರಣಕ್ಕಾಗಿ ನಾನು ಸದರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ ಅಲ್ಲ. ನಿಡಿ-೧ ರಲ್ಲಿ ತಪ್ಪಾಗಿ ಪೂರ್ವ ದಿಕ್ಕಿಗೆ ರಸ್ತೆ ಇದೆ ಎಂದು ಬರೆಸಿಕೊಂಡಿರುತ್ತೇನೆ, ಆದಕಾರಣದಿಂದ ನಿಡಿ-೧ಕ್ಕೆ ಸಹಿ ಮಾಡಲು ವಾದಿಯನ್ನು ಕರೆದಿರುವುದಿಲ್ಲ ಎಂದರೆ ಸರಿ ಅಲ್ಲ. ನನಗೆ ಮಾರಾಟ ಮಾಡಿದವರಿಗೆ ಪೂ-ಪ 21 ಫೀಟು ದ-ಉ 40 ಫೀಟು ಮಾರಾಟ ಮಾಡುವ ಅಧಿಕಾರ ಮಾತ್ರ ಇದೆ ಎಂದರೆ ಸರಿ ಅಲ್ಲ. ಅವರು ಅಷ್ಟನ್ನೇ ಮಾರಾಟ ಮಾಡಿರುತ್ತಾರೆ, ನಾನೇ ನನ್ನ ಖರೀದಿ ಪತ್ರದಲ್ಲಿ ಹೆಚ್ಚಿಗೆ ಬರೆಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ನನ್ನ ಮನೆಯ ಪೂರ್ವ ದಿಕ್ಕಿಗೆ ನೀಲೂರ ಕುಟುಂಬದವರಿಗೆ ಕೃಷಿ ಬಳಕೆ ವಸ್ತುಗಳನ್ನು ಶೇಖರಣೆ ಮಾಡಿ ಇಡಲು ಸ್ಥಳ ಇದೆ ಯಾವುದೇ ರೀತಿಯ ರಸ್ತೆ ಇದೆ ಎಂದರೆ ಸರಿ ಅಲ್ಲ. ದಿ: 04.02.2018 ರಲ್ಲಿ ಪಂಚಾಯತಿ ಸೇರಿರುತ್ತಾರೆ ಅದರಲ್ಲಿ ಪಂಚರು ಇದ್ದರು ಅದರಲ್ಲಿ ಒಂದು ಒಪ್ಪಿಗೆ ಪತ್ರವನ್ನು ಮಾಡಿರುತ್ತಾರೆ ಅದರಲ್ಲಿ ನನ್ನ ಸಹಿ ಇದೆ ಎಂಧರೆ ಸರಿ. ನಿಪಿ-26 ರ ಪ್ರಕಾರ ನೀವು ನಡೆದುಕೊಂಡು ಹೋಗಲು ತಯಾರಿದ್ದೀರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಪಿ-೨೬ನ್ನು ರದ್ದು ಮಾಡಿದ್ದೇನೆ ಎಂದು ಹೇಳಿ ವಾದಿಗೆ ನೋಟಿಸ್ ನೀಡಿದ್ದೀರಾ ಎಂದರೆ ಸಾಕ್ಷಿ ಪಂಚಾಯತಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪಂಚಾಯತಿಗೆ ಏನು ಕೊಟ್ಟಿರುತ್ತೇನೋ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂಧರೆ ಸರಿ ಅಲ್ಲ.

ನನ್ನ ಮನೆಯ ಪೂರ್ವ ದಿಕ್ಕಿಗೆ ನನಗೆ ಬಳಕೆ ಮಾಡುವ ಅಧಿಕಾರ ಇಲ್ಲ ಎಂದರೆ ಸರಿ ಅಲ್ಲ. ಪೂರ್ವ ದಿಕ್ಕಿಗೆ ರಸ್ತೆ ಇದೆ, ದಕ್ಷಿಣ ದಿಕ್ಕಿಗೆ 2 ಫೀಟು ಸಂದಿ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸ್ಥಳ ವೀಕ್ಷಣೆ ಮಾಡಲು ಆಳಂದ ಬಾರ್ ವಕೀಲರ ಸಂಘದಿಂದ ಯಾರನ್ನಾದರೂ ನೇಮಕ ಮಾಡಿದರೆ ತಕರಾರು ಇದೆಯಾ ಎಂಧರೆ ಸಾಕ್ಷಿಯು ನನ್ನದು ಯಾವುದೇ ತಕರಾರು ಇಲ್ಲ ಎಂದು ನುಡಿಯುತ್ತಾರೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿ.06.09.2018 ರಂದು ನನ್ನ ಕಟ್ಟಡಕ್ಕೆ ಯಾವುದೇ

ಪರವಾನಿಗೆ ನೀಡಿರುವುದಿಲ್ಲ ಎಂದು ವಾದಿಗೆ ಪತ್ರದ ಮೂಲಕ ತಿಳಿಸಿರುತ್ತಾರೆ ಎಂದರೆ ಸರಿ ಅಲ್ಲ. ನಂತರ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಕಟ್ಟಡ ಪರವಾನಿಗೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿ ಅಲ್ಲ. ವಾದಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.